ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ-ಸಿಂಡಿಕೇಟ್/398 /2023-24 ದಿನಾಂಕ:14.03.2024

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 12.03.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 12.03.2024 ರಂದು ಅಪರಾಹ್ನ 3.00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಸಿಂಡಿಕೇಟ್/ಅಸಾಮಾನ್ಯ/328 /2023-24 ದಿನಾಂಕ: 14.03.2024

ದಿನಾಂಕ 12.03.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

<u>ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಸಿ. ಎಂ. ನವೀನ್‌ಕುಮಾರ್ | ಸದಸ್ಯರು |
| 6. | ಶ್ರೀ. ರಮೇಶ್ ನಾರಾಯಣ್ ರಾವ್ | ಸದಸ್ಯರು |
| 7. | ಡಾ. ಪ್ರೇಮ | ಸದಸ್ಯರು |
| 8. | ಡಾ. ಪಂಕಜ್ ಚೌಧರಿ | ಸದಸ್ಯರು |
| 9. | ಡಾ. ಪಿ. ಆರ್. ಚೇತನಾ | ಸದಸ್ಯರು |
| 10. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಸಭೆಯ ಅಧ್ಯಕ್ಷತೆ ವಹಿಸಿದ ಮಾನ್ಯ ಕುಲಪತಿಗಳಿಗೆ ಹಾಗೂ ಉಪಸ್ಥಿತ ಸದಸ್ಯರುಗಳಿಗೆ ಸ್ವಾಗತ ಕೋರಿ ಪ್ರಸ್ತಾವಿಕ ನುಡಿಗಳೊಂದಿಗೆ ಸಭೆಗೆ ಚಾಲನೆ ನೀಡಲು ವಿನಂತಿಸಿದರು.

ಸಭಾಧ್ಯಕ್ಷರಾದ ಕುಲಪತಿಗಳು ಎಲ್ಲ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯಂತೆ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು.

ಅದರಂತೆ ಕೆಳಕಂಡ ಕಾರ್ಯಸೂಚಿಯನ್ನು ಮಂಡಿಸಲಾಯಿತು.

ವಿಷಯ ಸಂಖ್ಯೆ: 01

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳು ಸೇವಾ ಶುಲ್ಕವನ್ನು ಹೆಚ್ಚಳ ಮಾಡುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಲು ರಚಿಸಿದ ಸಮಿತಿ ಸಲ್ಲಿಸಿದ ವರದಿಯನ್ನು ಅನುಮೋದಿಸುವ ಕುರಿತು

ಉಲ್ಲೇಖ: ಸಮಿತಿಯು ವರದಿ ಸಲ್ಲಿಸಿರುವ ದಿನಾಂಕ: 01.03.2024.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳು ಸೇವಾ ಶುಲ್ಕವನ್ನು ಹೆಚ್ಚಳ ಮಾಡುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿ ವರದಿಯನ್ನು ನೀಡಲು ವಿಶ್ವವಿದ್ಯಾನಿಲಯವು ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿಯ ಸಭೆಯನ್ನು ದಿನಾಂಕ: 01.03.2024 ರಂದು ಅಪರಾಹ್ನ 3.00 ಗಂಟೆಗೆ ಕುಲಸಚಿವರು (ಮೌಲ್ಯಮಾಪನ) ರವರ ಕೊಠಡಿಯಲ್ಲಿ ಕರೆಯಲಾಗಿತ್ತು. ಸದರಿ ಸಭೆಯಲ್ಲಿ ನಡೆದ ಸಭಾ ನಡವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ Examination Process Management ಮತ್ತು E-Governance in Examination Management ಹೊರಗುತ್ತಿಗೆ ಆಧಾರದ ಮೇಲೆ ಸೇವೆಗಳನ್ನು ನೀಡುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳ ಸೇವಾ ಶುಲ್ಕವನ್ನು ದರ ಸಂಧಾನದ ಮೂಲಕ ನಿರ್ಧರಿಸಲು ರಚಿಸಲಾದ ಸಿಂಡಿಕೇಟ್ ಉಪ ಸಮಿತಿಯ ವರದಿಗೆ ಒಪ್ಪಿಗೆ ನೀಡಿ, ಸಮಿತಿಯ ಶಿಫಾರಸ್ಸಿನಂತೆ M/s Logisys ಸಂಸ್ಥೆಗೆ ಪ್ರತಿ ವಿದ್ಯಾರ್ಥಿಗಳಿಗೆ ರೂ. 365/- ಗಳನ್ನು ಹಾಗೂ M/s Uniclare ಸಂಸ್ಥೆಗೆ ಪ್ರತಿ ವಿದ್ಯಾರ್ಥಿಗಳಿಗೆ ರೂ. 235/- ಗಳಂತೆ ಒಟ್ಟು ಒಬ್ಬ ವಿದ್ಯಾರ್ಥಿಗೆ ರೂ. 600/- ರಂತೆ ನಿಗಧಿಪಡಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಒಪ್ಪಿಗೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 2**

ವಿಷಯ: ಪ್ರಸನ್ನ ಕುಮಾರ ಬ್ಲಾಕ್‌ನಲ್ಲಿ ನಿರ್ಮಿಸಲಾದ ಶೈಕ್ಷಣಿಕ ಬ್ಲಾಕ್, ಕ್ರೀಡಾ ಸಮುಚ್ಚಯ ಹಸ್ತಾಂತರ ಹಾಗೂ ಹಲವು ಸ್ನಾತಕೋತ್ತರ ವಿಭಾಗಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿ ಪಾಠ ಪ್ರವಚನ ಪ್ರಾರಂಭಿಸುವುದು ಮತ್ತು ಹೊಸದಾಗಿ ನಿರ್ಮಿಸಲಾದ ಈಜುಕೊಳ ಹಾಗೂ ಸಿ.ಎಸ್.ಆರ್ ಅಡಿಯಲ್ಲಿ ನವೀಕರಿಸಲಾದ ಪೆವಿಲಿಯನ್ ಕಟ್ಟಡಗಳನ್ನು ಉದ್ಘಾಟನೆ ಮತ್ತು ಕ್ರೀಡಾ ಸಮುಚ್ಚಯದ ನಿರ್ವಹಣೆಗೆ ಆಸಕ್ತಿ ವ್ಯಕ್ತಪಡಿಸುವ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸುವುದು

*ವಿವರಣೆ:*

ಆವರಣದಲ್ಲಿರುವ ಐತಿಹಾಸಿಕ ಕಟ್ಟಡಗಳ ನವೀಕರಣ ಹಾಗೂ ಪ್ರಸನ್ನಕುಮಾರ ಬ್ಲಾಕ್‌ನಲ್ಲಿ ನಿರ್ಮಿಸಲಾದ ಸುಸಜ್ಜಿತ ಶೈಕ್ಷಣಿಕ ಕಟ್ಟಡ ಹಾಗೂ ಕ್ರೀಡಾ ಸಮುಚ್ಚಯಗಳನ್ನು ಉದ್ಘಾಟನೆಗೊಂಡಿದ್ದು ಕಟ್ಟಡಗಳನ್ನು ಹಾಗೂ ಅವುಗಳಲ್ಲಿ ಒದಗಿಸಲಾಗಿರುವ ಪಿಠೋಪಕರಣ, ಸಲಕರಣೆ, ತಾಂತ್ರಿಕ ವ್ಯವಸ್ಥೆ ಹಾಗೂ ಕ್ರೀಡಾ ಸಾಮಗ್ರಿಗಳನ್ನು ಪಟ್ಟಿ ಮಾಡಿ ಕುಲಸಚಿವರು ವಶಕ್ಕೆ ತೆಗೆದುಕೊಳ್ಳಬೇಕಾಗಿದೆ. ಸುಸಜ್ಜಿತವಾದ ಶೈಕ್ಷಣಿಕ ಕಟ್ಟಡದಲ್ಲಿ ಕೆಲವು ಸ್ನಾತಕೋತ್ತರ ವಿಭಾಗಗಳನ್ನು ಸ್ಥಳಾಂತರಿಸಿ ಪಾಠ ಪ್ರವಚನಗಳನ್ನು ಪ್ರಾರಂಭಿಸಬೇಕಾಗಿದೆ. ಇದಲ್ಲದೆ ವಿಶ್ವವಿದ್ಯಾನಿಲಯ ಹಲವು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಅವುಗಳ ಸಹಯೋಗದೊಂದಿಗೆ ಉತ್ಕೃಷ್ಟ ಸಂಶೋಧನಾ ಕೇಂದ್ರಗಳು, Incubation Centres, Start-ups ಪ್ರಾರಂಭಿಸಲು ಯುವ ಉದ್ಯಮಿಗಳಿಗೆ ಅವಕಾಶ ಒದಗಿಸುವುದು, ಒಡಂಬಡಿಕೆಗಳ ಅನುಸಾರ ನಮ್ಮ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಕೈಗಾರಿಕೆಗಳಿಗೆ ಹಾಗೂ ವಿದೇಶಿ ವಿಶ್ವವಿದ್ಯಾನಿಲಯಗಳಿಗೆ Placement – Training, Internship ಚಟುವಟಿಕೆಗಳನ್ನು ಮತ್ತು ಸಂಶೋಧನೆ ಕುರಿತಂತೆ Online-Offline ಮಾದರಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಲು ಮತ್ತು Consultancyಗಾಗಿ ಸ್ಥಳಾವಕಾಶ ಕಲ್ಪಿಸಬೇಕಾಗಿದೆ. ಈ ಎಲ್ಲ ಕಾರ್ಯಕ್ರಮಗಳನ್ನು Expression of Interest (EoI) ಮತ್ತು E-procurement ಹಾಗೂ Memorandum of Understanding (MoU)ಗಳ ಮುಖಾಂತರ ಜಾರಿಯಲ್ಲಿ ತರಬೇಕಾಗುತ್ತದೆ.

ಕ್ರೀಡಾ ಸಮುಚ್ಚಯದಲ್ಲಿ ಹಲವಾರು ಕ್ರೀಡೆಗಳಿಗೆ ಒಳಾಂಗಣಗಳನ್ನು ನಿರ್ಮಿಸಿದ್ದು, ಪ್ರತಿಯೊಂದು ಪಂದ್ಯಕ್ಕೆ ಅಂಗಳಗಳನ್ನು ಸಿದ್ಧಪಡಿಸಿದ್ದು ಏಕಕಾಲದಲ್ಲಿ 3–4 ತಂಡಗಳು ಆಟ ಆಡಲು ಅವಕಾಶ ನೀಡುತ್ತದೆ. ಇಂತಹ 7–8 ಕ್ರೀಡೆಗಳಿಗೆ ಒಳಾಂಗಣಗಳನ್ನು ನಿರ್ಮಿಸಲಾಗಿದ್ದು, ಎಲ್ಲವು ಆಧುನಿಕ ಕ್ರೀಡಾ ಸಾಮಗ್ರಿಗಳಿಂದ ಸುಸಜ್ಜಿತಗೊಳಿಸಲಾಗಿದೆ. ಇದಲ್ಲದೇ ಹೊರಾಂಗಣ, ಕ್ರೀಡಾಂಗಣ ಸಹ ಆಧುನಿಕವಾಗಿ ನಿರ್ಮಿಸಿದ್ದು, ಇದು ಕೂಡ ಅಂತರರಾಷ್ಟ್ರೀಯ ಮಟ್ಟ ಹೊಂದಿರುತ್ತದೆ. ಇದರೊಂದಿಗೆ ಆಧುನಿಕ ಅಂತರಾಷ್ಟ್ರೀಯ ಮಟ್ಟದ ಈಜುಕೊಳ ಸಿದ್ಧವಾಗಿದ್ದು, ಇವೆಲ್ಲವುಗಳನ್ನು ವಶಕ್ಕೆ ಪಡೆದು ನಿರ್ವಹಿಸುವುದು. ಸಿಬ್ಬಂದಿಗಳು, ತಂತ್ರಜ್ಞರು ಹಾಗೂ ತರಬೇತುದಾರರ ಅನುಪಸ್ಥಿತಿಯಲ್ಲಿ ಅತ್ಯಂತ ಸವಾಲಿನ ವಿಷಯವಾಗಿದ್ದು, ಇದಕ್ಕಾಗಿ ವೃತ್ತಿಪರ ಸಂಸ್ಥೆ, ಕ್ರೀಡಾ ಅಕಾಡೆಮಿಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಹೊರದೇಶದ ವಿಶ್ವವಿದ್ಯಾಲಯಗಳಿಂದ Expression of Interest ಪಡೆದು ಒಡಂಬಡಿಕೆ ಮಾಡಿಕೊಂಡು (MoU) ಅಥವಾ E-procurement of Service ಮುಖಾಂತರ ಪರಿಣಾಮಕಾರಿ ನಿರ್ವಹಣೆ, ಮೇಲ್ವಿಚಾರಣೆ ಹಾಗೂ ಕಾರ್ಯಸಾಧ್ಯವಾಗಿಸಲು (Opreation, Supervison and Maintenance) ಸಾಧ್ಯವಾಗುತ್ತದೆ ಎಂದು ಹೇಳಿದರು.

ಹೊಸದಾಗಿ ನಿರ್ಮಿಸಲಾದ ಈಜುಕೊಳ ಹಾಗೂ ನವೀಕೃತ ಪೆವಿಲಿಯನ್‌ಗಳನ್ನು ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಕ್ರಮ ಆಯೋಜಿಸುವ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉದ್ಘಾಟಿಸಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಅನಾವರಣಗೊಳಿಸುವ ಆಶಯವನ್ನು ಕುಲಪತಿಗಳು ಸಭೆಯಲ್ಲಿ ವ್ಯಕ್ತಪಡಿಸಿದರು. ಸದಸ್ಯರಾದ ಶ್ರೀ.ಎಂ.ವಿ ರಂಗಪ್ಪನವರು ಸಹಮತ ವ್ಯಕ್ತಪಡಿಸಿ ಸಿಂಡಿಕೇಟ್ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ಹಂತದಲ್ಲಿ ಕಾರ್ಯಕ್ರಮ ರೂಪಿಸಬಹುದೆಂದು ತಿಳಿಸಿದರು.

*ಸಿಂಡಿಕೇಟ್ ತೀರ್ಮಾನ:*

1. ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ ಸುಸಜ್ಜಿತವಾದ ನೂತನ ಶೈಕ್ಷಣಿಕ ಕಟ್ಟಡ ಹಾಗೂ ಅದರಲ್ಲಿರುವ ಉಪಕರಣ, ಪೀಠೋಪಕರಣ, ತಾಂತ್ರಿಕ ಸೌಲಭ್ಯಗಳನ್ನು ಒಳಗೊಂಡಂತೆ ಕುಲಸಚಿವರ ನೇತೃತ್ವದಲ್ಲಿ ವಶಕ್ಕೆ ಪಡೆಯಲು ಮತ್ತು ಸದರಿ ಕಟ್ಟಡದಲ್ಲಿರುವ ಕೋಣೆ/ ಸ್ಥಳಗಳನ್ನು ಆಯಾ ವಿಭಾಗಗಳ ಅಗತ್ಯಗಳನ್ನು ಪರಿಗಣಿಸಿ ಹಂಚಿಕೆ ಮಾಡಿ ವಿಭಾಗಗಳನ್ನು ಸ್ಥಳಾಂತರಿಸಲು ಮತ್ತು ಉತ್ಕೃಷ್ಟ ಸಂಶೋಧನಾ ಕೇಂದ್ರಗಳು, **Incubation Centres, Start-ups** ಪ್ರಾರಂಭಿಸಲು ಯುವ ಉದ್ಯಮಿಗಳಿಗೆ ಅವಕಾಶ ಒದಗಿಸುವುದು, ಒಡಂಬಡಿಕೆಗಳ ಅನುಸಾರ ನಮ್ಮ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಕೈಗಾರಿಕೆಗಳಿಗೆ ಹಾಗೂ ವಿದೇಶಿ ವಿಶ್ವವಿದ್ಯಾನಿಲಯಗಳಿಗೆ **Placement, Training, Internship** ಚಟುವಟಿಕೆಗಳನ್ನು ಮತ್ತು ಸಂಶೋಧನೆ ಕುರಿತಂತೆ **Online-Offline** ಮಾದರಿ ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಲು ಮತ್ತು **Consultancy**ಗಾಗಿ ಸ್ಥಳಾವಕಾಶ ಕಲ್ಪಿಸಬೇಕಾಗಿದೆ. ಈ ಎಲ್ಲ ಕಾರ್ಯಕ್ರಮಗಳನ್ನು **Expression of Interest (EoI)** ಮತ್ತು **E-procurement** ಹಾಗೂ **Memorandum of Understanding (MoU)**ಗಳ ಮುಖಾಂತರ ಜಾರಿಗೆ ತರಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

2. ಕ್ರೀಡಾ ಸಮುಚ್ಚಯ, ಕ್ರೀಡಾಂಗಣ, ಈಜುಕೊಳಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕವಾಗಿ ಈ ಸೌಲಭ್ಯ ಹಾಗೂ ಸೌಕರ್ಯಗಳ ನಿರ್ವಹಣೆಗೆ ಆಸಕ್ತಿ ವ್ಯಕ್ತಪಡಿಸುವ ವೃತ್ತಿಪರ ಸಂಸ್ಥೆ, ಕ್ರೀಡಾ ಅಕಾಡೆಮಿಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಹೊರದೇಶದ ವಿಶ್ವವಿದ್ಯಾಲಯಗಳಿಂದ **Expression of Interest (EoI)** ಪಡೆದು ಒಡಂಬಡಿಕೆ ಮಾಡಿಕೊಂಡು ಅದನ್ನು **E-procurement of Service** ಅಥವಾ **MoU** ಮುಖಾಂತರ **Opreation, Supervision and Maintenance** ಗಾಗಿ ಕ್ರಮ ಕೈಕೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

3. ಈಜುಕೊಳ ಹಾಗೂ ಪೆವಿಲಿಯನ್‌ಗಳನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಅನುಕೂಲಕರವಾದ ದಿನಾಂಕದಂದು ಉದ್ಘಾಟಿಸಲು ಕ್ರಮವಹಿಸಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು.

**ವಿಷಯ ಸಂಖ್ಯೆ: 3**

ವಿಷಯ: ಶಿಥಿಲಗೊಂಡಿರುವ ಜಾಗತಿಕ ಭಾಷಾ ಕೇಂದ್ರದ ಕಟ್ಟಡವನ್ನು ನೆಲಸಮಗೊಳಿಸಿ ಅಲ್ಲಿ ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡಾ ತರಬೇತುಗಾರರಿಗೆ ಅತಿಥಿ ಗೃಹ ನಿರ್ಮಿಸುವ ಕುರಿತು

***ಪರಾಮರ್ಶಕ ಟಿಪ್ಪಣಿ:***

ಈಗಿರುವ ಜಾಗತಿಕ ಭಾಷಾ ಕೇಂದ್ರ ಕಟ್ಟಡವು ಸಂಪೂರ್ಣ ಶಿಥಿಲಗೊಂಡಿರುವುದರಿಂದ ಜಾಗತಿಕ ಭಾಷಾ ಕೇಂದ್ರವನ್ನು ಹೊಸ ವಾಣಿಜ್ಯ ಕಟ್ಟಡದ ನೆಲಮಹಡಿಗೆ ಸ್ಥಳಾಂತರಿಸಲಾಗಿದೆ.

ಜಾಗತಿಕ ಭಾಷಾ ಕೇಂದ್ರ ಕಟ್ಟಡವು ಬಹಳ ಹಳೆಯದಾಗಿದ್ದು ಶಿಥಿಲವಾಗಿರುವುದರಿಂದ ಕಟ್ಟಡವನ್ನು ಯಾವುದೇ ಉದ್ದೇಶಕ್ಕೆ ಬಳಸಲು ಸಾಧ್ಯವಿರುವುದಿಲ್ಲ, ಆದುದರಿಂದ ಈ ಕಟ್ಟಡವನ್ನು ನೆಲಸಮಗೊಳಿಸಬೇಕಾಗಿರುತ್ತದೆ. ನೆಲಸಮಗೊಳಿಸಬೇಕಾದ ಕಟ್ಟದ ವಿಸ್ತೀರ್ಣವು 600 ಚದರ ಮೀಟರ್.

ನೆಲಸಮಗೊಳಿಸಬೇಕಾದ ಜಾಗತಿಕ ಭಾಷಾ ಕೇಂದ್ರ ಕಟ್ಟಡವು ಹೊಸ ಕ್ರೀಡಾ ಬ್ಲಾಕ್ ಕಟ್ಟಡದ ಹಿಂಭಾಗದಲ್ಲಿದೆ. ಆದುದರಿಂದ ಜಾಗತಿಕ ಭಾಷಾ ಕೇಂದ್ರ ಕಟ್ಟಡವನ್ನು ನೆಲಸಮಗೊಳಿಸಿದರೆ ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡಾ ತರಬೇತುದಾರರಿಗೆ ನಿರ್ಮಿಸಬೇಕಾದ ಅತಿಥಿ ಗೃಹಕ್ಕೆ ಹೆಚ್ಚುವರಿ ಜಾಗವು ದೊರೆಯುತ್ತದೆ.

ಇದಲ್ಲದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಈಗ ಕ್ರೀಡಾ ಬ್ಲಾಕ್ ಕಟ್ಟಡ ಮತ್ತು ಈಜುಕೊಳದ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತದೆ.

ಕ್ರೀಡಾ ಬ್ಲಾಕ್‌ನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| Number of floors | Ground floor + 2 |
| Number of lifts | 2 |
| Number of staircase | 2 |

**Ground floor**

| | |
|---|---|
| Floor area | 3317 Sq mt |
| Parking area | 1980 Sq mt<br>69 numbers of four wheelers and two wheelers |
| Cafeteria with dining area | 62 persons |

**First floor**

| | |
|---|---|
| Floor area | 3317 Sq mt |
| Facilities | Male change room, Female change room , Common room, Office, TT room, Gallery for 300 persons, Sports hall -1, Sports hall - 2 |

**Second floor**

| | |
|---|---|
| Floor area | 1591 Sq mt |
| Facilities | Martial arts hall, Gymnasium, Sports science department , Yoga hall, Class room -1, Class room -2, Class room -3 |

**Swimming pool**

| | |
|---|---|
| Total area | 1607.75 Sq mt |
| Facilities | *Entrance Lobby<br>*Coach room<br>*First Aid Room<br>*Gents change room: *toilets 3nos<br>*Ladies change room: *toilet one nos<br>*Store room<br>*Electrical room |

ಕ್ರೀಡಾ ಬ್ಲಾಕ್ ಕಟ್ಟಡ ಮತ್ತು ಈಜುಕೊಳ ಈ ಎರಡೂ ಅಂತರರಾಷ್ಟ್ರೀಯ ಗುಣಮಟ್ಟವನ್ನು ಹೊಂದಿರುತ್ತದೆ. ಆದುದರಿಂದ ಅನೇಕ ತರಬೇತುದಾರರು, ದೈಹಿಕ ಶಿಕ್ಷಣ ಶಿಕ್ಷಕರು, ಇತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

ಆದುದರಿಂದ ವಿದ್ಯಾರ್ಥಿಗಳಿಗೆ ವಿವಿಧ ಕ್ರೀಡೆಗಳಲ್ಲಿ ತರಬೇತಿ ನೀಡಲು ಮತ್ತು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಿಗೆ, ವಿದೇಶಿ ತರಬೇತುದಾರರಿಗೆ ತರಬೇತಿ ನೀಡಲು ಹಾಗೂ ಕ್ರೀಡಾ ಬ್ಲಾಕ್ ಕಟ್ಟಡಕ್ಕೆ ಭೇಟಿ ನೀಡುವ ತರಬೇತುದಾರರಿಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿಗೆ ವಸತಿಗಾಗಿ ವಿಶೇಷ ಅತಿಥಿ ಗೃಹ / ಹಾಸ್ಟೆಲ್ ಸೌಲಭ್ಯವನ್ನು ಒದಗಿಸಬೇಕಾಗಿರುತ್ತದೆ.

ಆದುದರಿಂದ ಶಿಥಿಲಗೊಂಡಿರುವ ಜಾಗತಿಕ ಭಾಷಾ ಕೇಂದ್ರದ ಕಟ್ಟಡವನ್ನು ನೆಲಸಮಗೊಳಿಸಿ ಅಲ್ಲಿ ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡಾ ತರಬೇತುದಾರರಿಗೆ ಅತಿಥಿ ಗೃಹ ನಿರ್ಮಿಸುವ ಕುರಿತು ಚರ್ಚಿಸಲು ಹಾಗೂ ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಶಿಥಿಲಗೊಂಡಿರುವ ಜಾಗತಿಕ ಭಾಷಾ ಕೇಂದ್ರಗಳ ಕಟ್ಟಡಗಳನ್ನು ನೆಲಸಮಗೊಳಿಸಿ ಅಲ್ಲಿ ಕ್ರೀಡೆಗಳಿಗಾಗಿ ಬೇರೆ ಪ್ರದೇಶ, ದೇಶಗಳಿಂದ ಆಗಮಿಸುವ ಕ್ರೀಡಾ ಪಟುಗಳಿಗೆ ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತರಬೇತುದಾರರಿಗಾಗಿ ಅತಿಥಿಗೃಹ ನಿರ್ಮಾಣಕ್ಕೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿ. ಈ ಕುರಿತು ವಿವರವಾದ ಅಂದಾಜು ಪಟ್ಟಿ ಹಾಗೂ ವಾಸ್ತುಶಿಲ್ಪಿಗಳಿಂದ ವಿನ್ಯಾಸವನ್ನು ಸಿದ್ಧಪಡಿಸಿ ಕಾಮಗಾರಿ ಸಮಿತಿ ಸಭೆಯಲ್ಲಿ ಮಂಡಿಸಿ, ನಿಯಮಾನುಸಾರ ಕಾಮಗಾರಿಯನ್ನು ನಿರ್ವಹಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 4

ವಿಷಯ ವಿಶ್ವವಿದ್ಯಾನಿಲಯದಲ್ಲಿ ಸಹ ಪ್ರಾಧ್ಯಾಪಕರಾಗಿ (ಶೈಕ್ಷಣಿಕ ಹಂತ – 13ಎ) ಕಾರ್ಯನಿರ್ವಹಿಸುತ್ತಿರುವ ಬೋದಕರಿಗೆ CAS ಅಡಿಯಲ್ಲಿ ಪ್ರಾಧ್ಯಾಪಕರ ಹುದ್ದೆಗೆ (ಶೈಕ್ಷಣಿಕ ಹಂತ – 14) ಬಡ್ತಿ ನೀಡುವ ಕುರಿತು ಆಯ್ಕೆ ಸಮಿತಿ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

CAS ಅಡಿಯಲ್ಲಿ ಬಡ್ತಿ ಪಡೆಯಲು ಅರ್ಹರಿರುವ ಬೋಧಕರಿಗೆ ಮುಂಬಡ್ತಿ ನೀಡಲು ದಿನಾಂಕ: 31.07.2023 ರ ಸಿಂಡಿಕೇಟ್‌ನ ನಿರ್ಣಯದಂತೆ ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ಪರಿನಿಯಮಗಳನ್ನು ದಿನಾಂಕ: 05.09.2023 ರ ಆದೇಶದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ 5.4 B (IV) ಪ್ರಕಾರ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 13ಎ) ರಿಂದ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 14) ಅರ್ಹರಿರುವ ಬೋಧಕರಿಂದ ವಿಶ್ವವಿದ್ಯಾನಿಲಯ ಅಧಿಸೂಚನೆ ದಿನಾಂಕ: 11.09.2023 ಹಾಗೂ 20.09.2023ರ ಪ್ರಕಾರ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು. ಈ ಅಧಿಸೂಚನೆ ಅನುಸಾರ ಅರ್ಹ ಬೋಧಕರು ವೃತ್ತಿ ಪದೋನ್ನತಿಗೆ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಿರುತ್ತಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ 5.4B (IV) ಪ್ರಕಾರ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 13ಎ) ರಿಂದ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 14) ಹುದ್ದೆಗೆ ಮುಂಬಡ್ತಿ ಪಡೆಯಲು ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| | |
|---|---|
| 1. | Length of Service: 3 years as Associate Professor in Academic Level 13A |
| 2. | A Ph.D degree in the subject concerned/allied/relevant discipline. |
| 3. | A Minimum of ten research publications in the peer-reviewed or UGC-listed journals out of which three research papers should have been published during the assessment period. |
| 4. | Evidence of having successfully guided doctoral candidates.<br>A minimum of 110 Research Score as per Appendix I, Table 2 of UGC Regulations 2018. |

ಈ ಕೆಳಕಂಡ ಬೋಧಕರು ಅವರ ಹೆಸರಿನ ಮುಂದೆ ಕಾಲಂ 3ರಲ್ಲಿ ನಮೂದಿಸಿರುವ ದಿನಾಂಕಕ್ಕೆ ಸಹಾಯಕ–ಪ್ರಾಧ್ಯಾಪಕ ಹುದ್ದೆ (ಹಂತ–3) ರಿಂದ ಸಹ–ಪ್ರಾಧ್ಯಾಪಕ (ಹಂತ–4) ಹುದ್ದೆಗೆ ಬಡ್ತಿ ಹೊಂದಿರುತ್ತಾರೆ. ಮೇಲೆ ನಮೂದಿಸಿದ ನಿಯಮಗಳ ಪ್ರಕಾರ ಕಾಲಂ 4ರಲ್ಲಿ ನಮೂದಿಸಿರುವ ದಿನಾಂಕಗಳಿಗೆ 3 ವರ್ಷಗಳ ಸೇವಾವಧಿ ಪೂರೈಸಿ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 14) ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುತ್ತಾರೆ.

| ಕ್ರ.ಸಂ | ಹೆಸರು | ಸಹ–ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆದ ದಿನಾಂಕ | ಸಹ–ಪ್ರಾಧ್ಯಾಪಕ ಹುದ್ದೆಯಲ್ಲಿ 03 ವರ್ಷ ಪೂರ್ಣಗೊಳಿಸಿದ ದಿನಾಂಕ |
|---|---|---|---|
| 1 | ಡಾ: ಕೆ. ಆರ್. ಜಲಜಾ<br>ಸಹ–ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ | 29-03-2017 | 29-03-2020 |

| | | | |
|---|---|---|---|
| 2 | ಡಾ:ಮೇಧ ಇಟಗಿ ಹುಯಿಲ್ಗೊಳ್<br>ಸಹ–ಪ್ರಾಧ್ಯಾಪಕರು, ಗಣಿತ ಶಾಸ್ತ್ರ ವಿಭಾಗ | 10-03-2019 | 10-03-2022 |
| 3 | ಡಾ:ರಮೇಶ್ ಬಿ ಕುದೇನಟ್ಟಿ<br>ಸಹ–ಪ್ರಾಧ್ಯಾಪಕರು, ಗಣಿತ ಶಾಸ್ತ್ರ ವಿಭಾಗ | 12-03-2019 | 12-03-2022 |
| 4 | ಡಾ:ಎಂ.ನಿರ್ಮಲ<br>ಸಹ–ಪ್ರಾಧ್ಯಾಪಕರು,ನಿರ್ವಹಣಾ<br>ವಿಭಾಗ(ಸಿ.ಬಿ.ಎಸ್.ಎಂ.ಎಸ್) | 23-03-2019 | 23-03-2022 |
| 5 | ಡಾ:ರಿತಿಕಾ ಸಿನ್ಹ<br>ಸಹ–ಪ್ರಾಧ್ಯಾಪಕರು,ನಿರ್ವಹಣಾ<br>ವಿಭಾಗ(ಸಿ.ಬಿ.ಎಸ್.ಎಂ.ಎಸ್) | 26-04-2019 | 26-04-2022 |

ಮೇಲ್ಕಂಡ ಬೋಧಕರಿಗೆ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 13ಎ) ರಿಂದ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 14)ಕ್ಕೆ ಬಡ್ತಿ ನೀಡುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ ಪ್ರಕಾರ ರಚಿಸಲಾದ ಆಯ್ಕೆ ಸಮಿತಿ ಸಭೆಯನ್ನು ದಿನಾಂಕ: 01.03.2024ರಂದು ನಡೆಸಲಾಯಿತು. ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುವುದು.

**ವಿವರಣೆ:**

ಸದಸ್ಯರಾದ ಡಾ. ಪಿ. ಆರ್. ಚೇತನಾ, ಡಾ. ಎಸ್. ಹರಿಪ್ರಸಾದ್ ಮತ್ತು ಶ್ರೀ. ಎಂ.ವಿ ರಂಗಪ್ಪನವರು ವಿಶ್ವವಿದ್ಯಾನಿಲಯದ ಎಲ್ಲ ಅರ್ಹ ಬೋಧಕರಿಗೆ ಪದೋನ್ನತಿ ನೀಡಲು ಮಾನ್ಯ ಕುಲಪತಿಗಳು ವೈಯಕ್ತಿಕವಾಗಿ ಆಸಕ್ತಿ ವಹಿಸಿ ಎಲ್ಲಾ ಪ್ರಕ್ರಿಯೆಗಳನ್ನು ಕೈಗೊಂಡು ಅತ್ಯಂತ ಕ್ಲುಪ್ತ ಸಮಯದಲ್ಲಿ ಪದೋನ್ನತಿ ನೀಡುತ್ತಿರುವುದು ಶಿಕ್ಷಕ ಸಮುದಾಯಕ್ಕೆ ಹೆಮ್ಮೆ ಹಾಗೂ ಸಂತೋಷದ ವಿಷಯವಾಗಿದ್ದು ಇದಕ್ಕಾಗಿ ಮಾನ್ಯ ಕುಲಪತಿಗಳಿಗೆ ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಮಾನ್ಯ ಕುಲಪತಿಗಳು ಪ್ರತಿಕ್ರಿಯಿಸಿ, ಇದು ಅಗಾಧವಾದ ಪ್ರಕ್ರಿಯೆ ವಿವಿಧ ವಿಶ್ವವಿದ್ಯಾಲಯಗಳಿಂದ ಪರಿಣಿತರ ಪಟ್ಟಿ ತರಿಸುವುದು, ಆಯ್ಕೆ ಸಮಿತಿ ರಚಿಸಿ ಸದಸ್ಯರುಗಳಿಗೆ ಸಭೆಗೆ ಆಗಮಿಸಲು ವೈಯಕ್ತಿಕವಾಗಿ ವಿನಂತಿಸಿರುವುದು ನಿಯಮಾವಳಿಗಳ ಪ್ರಕಾರ ಅರ್ಜಿಗಳ ಪರಿಶೀಲನೆ, ಅವುಗಳ ಪ್ರಕಾರ ವಿವಿಧ ಕೆಲಸಗಳ ನಿರ್ವಹಣೆ, ಇದು ಆಯ್ಕೆ ಸಮಿತಿಗಳಲ್ಲಿ ಕುಲಾಧಿಪತಿಗಳಿಂದ ನಾಮನಿರ್ದೇಶಿತರಾದ ಶೈಕ್ಷಣಿಕ ತಜ್ಞರು ನಿರಂತರವಾಗಿ ಎಲ್ಲ ಆಯ್ಕೆ ಸಮಿತಿಗಳಲ್ಲಿ ಭಾಗವಹಿಸಿ ನಡವಳಿಗಳನ್ನು ಗಮನಿಸುವುದು ಬಹಳ ಸಂಕೀರ್ಣವಾದ ವಿಷಯ, ಹಿರಿಯ ಪ್ರಾಧ್ಯಾಪಕ ಪದೋನ್ನತಿ ವಿಧಾನಗಳು ಎರಡು ಹಂತದಲ್ಲಿ ಜರುಗುತ್ತದೆ. ಪ್ರಥಮ ಹಂತದಲ್ಲಿ ಪ್ರಾಧ್ಯಾಪಕರ ಸಂಶೋಧನಾ ಲೇಖನಗಳ ಮೌಲ್ಯಾಂಕನವನ್ನು 3 ಜನ ವಿಷಯ ತಜ್ಞರಿಂದ ಪಡೆಯಬೇಕು ನಂತರ ಆಯ್ಕೆ ಸಮಿತಿಯ ಸಭೆ ಕರೆದು ಅಂತಿಮಗೊಳಿಸಬೇಕಾಗತ್ತದೆ. ಅನುಭವಿ ಸಿಬ್ಬಂದಿಗಳ ಕೊರತೆಯ ಮಧ್ಯೆ ಪ್ರಾಧಿಕಾರಗಳ ಸದಸ್ಯರ, ಶಿಕ್ಷಕರ, ಹಿರಿಯ ಸಮಾಲೋಚಕರ ಹಾಗೂ ಕೆಲವೇ ಸಿಬ್ಬಂದಿಗಳ ಸಹಕಾರದಿಂದ ಈ ಇದು ಸಾಧ್ಯವಾಗಿದೆ ಎಂದು ಹೇಳಿದರು.

ತಮ್ಮ ಅವಧಿಯಲ್ಲಿ ಕ್ಯಾಂಪಸ್ ಕಟ್ಟಡಗಳ ನವೀಕರಣ /ಹೊಸ ಕಟ್ಟಡ ನಿರ್ಮಾಣ – ಕ್ರೀಡಾ ಸಮುಚ್ಚಯ, ಹೊಸ ಕೋರ್ಸುಗಳ ಪ್ರಾರಂಭಿಸಿ, ಘಟಕ ಮಹಿಳಾ ಮಹಾವಿದ್ಯಾಲಯ ಸ್ಥಾಪನೆ, ವಿದೇಶಿ ವಿಶ್ವವಿದ್ಯಾನಿಲಗಳೊಡನೆ ಹೆಚ್ಚು ಒಡಂಬಡಿಕೆ ಮಾಡಿಕೊಂಡು ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು ಜರುಗುತಿರುವುದು, ಆವರಣದಲ್ಲಿ ಸ್ನಾತಕ ಕೋರ್ಸುಗಳ ಪ್ರಾರಂಭ ಮಾಡಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾಗಿರುವುದು, ಇವುಗಳ ಜೊತೆಗೆ ಶಿಕ್ಷಕರಿಗೆ ಪದೋನ್ನತಿ ಸಹ ನೀಡುತ್ತಿರುವುದರಿಂದ ಸಾರ್ಥಕ ಮನೋಭಾವನೆ ಉಂಟಾಗಿದೆ. ಶಿಕ್ಷಕರ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ನೇಮಕಾತಿ ಬಾಕಿ ಉಳಿದಿದ್ದು, ಅದನ್ನು ಸಾಧಿಸಿದಲ್ಲಿ, ಸಂಶೋಧನೆಗಳು ಜರುಗಿ ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

*ಸಿಂಡಿಕೇಟ್ ತೀರ್ಮಾನ:*

ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ ಮತ್ತು ವ್ಯವಸ್ಥಾಪನ (**Management Studies**) ವಿಷಯಗಳ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗಾಗಿ ಸಂಬಂಧಿಸಿದ ಆಯ್ಕೆ ಸಮಿತಿಗಳು ಮಾಡಿರುವ ಶಿಫಾರಸ್ಸುಗಳನ್ನು ಪರಿಗಣಿಸಿ, ಕೆಳಗೆ ನಮೂದಿಸಿದ ಸಹ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ **13A**) ರವರನ್ನು ಪ್ರಾಧ್ಯಾಪಕರು (ಶೈಕ್ಷಣಿಕ ಹಂತ **14**) ರ ಹುದ್ದೆಗಳಿಗೆ ಯು.ಜಿ.ಸಿ–ಸಿ.ಎ.ಎಸ್ ನಿಯಮಾವಳಿಗಳ ಪ್ರಕಾರ ಅವರ ಹೆಸರುಗಳ ಮುಂದೆ ತೋರಿಸಿದ ಅರ್ಹತಾ ದಿನಾಂಕದಿಂದ ಅನ್ವಯಿಸಿ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

1. **Department of Commerce**

| **Name** | **Recommendation** | **Date of Eligibility** |
|---|---|---|
| **Dr. K.R. Jalaja** | **Recommended for Promotion from Associate Professor (Academic Level-13A) to Professor (Academic Level 14)** | **07.09.2020** |

2. **Department of Management Studies**

| **Name** | **Recommendation** | **Date of Eligibility** |
|---|---|---|
| 1. **Dr. Nirmala M** | **Recommended for Promotion from Associate Professor (Academic Level-13A) to Professor (Academic Level 14)** | **23.02.20222** |
| 2. **Dr. Ritika Sinha** | | **26.04.2022** |

3. **Department of Mathematics**

| **Name** | **Recommendation** | **Date of Eligibility** |
|---|---|---|
| 1. **Dr. Medha Itagi Huilgol** | **Recommended for Promotion from Associate Professor (Academic Level-13A) to Professor (Academic Level 14)** | **10.03.2022** |
| 2. **Dr. Ramesh B. Kudenatti** | | **12.03.2022** |

ವಿಷಯ ಸಂಖ್ಯೆ: 5

ವಿಷಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ (ಶೈಕ್ಷಣಿಕ ಹಂತ - 14)ರಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರಿಗೆ CAS ಅಡಿಯಲ್ಲಿ ಹಿರಿಯ ಪ್ರಾಧ್ಯಾಪಕರ ಹುದ್ದೆಗೆ (ಶೈಕ್ಷಣಿಕ ಹಂತ - 15) ಬಡ್ತಿ ನೀಡುವ ಕುರಿತು ಆಯ್ಕೆ ಸಮಿತಿ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

CAS ಅಡಿಯಲ್ಲಿ ಬಡ್ತಿ ಪಡೆಯಲು ಅರ್ಹರಿರುವ ಬೋಧಕರಿಗೆ ಮುಂಬಡ್ತಿ ನೀಡಲು ದಿನಾಂಕ: 31.07.2023 ರ ಸಿಂಡಿಕೇಟ್‌ನ ನಿರ್ಣಯದಂತೆ ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ಪರಿನಿಯಮಗಳನ್ನು ದಿನಾಂಕ: 05.09.2023ರ ಆದೇಶದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ 5.4 B(V) ಪ್ರಕಾರ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 14) ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 15) ಅರ್ಹರಿರುವ ಬೋಧಕರಿಂದ ವಿಶ್ವವಿದ್ಯಾನಿಲಯ ಅಧಿಸೂಚನೆ ದಿನಾಂಕ: 11.09.2023 ಹಾಗೂ 20.09.2023ರ ಪ್ರಕಾರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆ ಅನುಸಾರ ಅರ್ಹ ಬೋಧಕರು ವೃತ್ತಿ ಪದೋನ್ನತಿಗೆ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಿರುತ್ತಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ 5.4 B(V) ಪ್ರಕಾರ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 14) ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 15) ಹುದ್ದೆಗೆ ಮುಂಬಡ್ತಿ ಪಡೆಯಲು ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

| | |
|---|---|
| 1. | Ten years experience as Professor |
| 2. | A minimum of ten publications in the Peer-Reviewed Refereed/ISSN or UGC-listed journals and Ph.D degree has been successfully awarded to two candidates under his/her supervision during the assessment period. |

ಈ ಕೆಳಕಂಡ ಬೋದಕರು ಅವರ ಹೆಸರಿನ ಮುಂದೆ ಕಾಲಂ 3ರಲ್ಲಿ ನಮೂದಿಸಿರುವ ದಿನಾಂಕಕ್ಕೆ ಸಹ ಪ್ರಾಧ್ಯಾಪಕ ಹುದ್ದೆ (ಹಂತ–4) ರಿಂದ ಪ್ರಾಧ್ಯಾಪಕ (ಹಂತ–5)ಹುದ್ದೆಗೆ ಬಡ್ತಿ ಹೊಂದಿರುತ್ತಾರೆ ಹಾಗೂ ಮೇಲೆ ನಮೂದಿಸಿದ ನಿಯಮಗಳ ಪ್ರಕಾರ ಕಾಲಂ 4ರಲ್ಲಿ ನಮೂದಿಸಿರುವ ದಿನಾಂಕಗಳಿಗೆ 10 ವರ್ಷಗಳ ಸೇವಾವಧಿ ಪೂರೈಸಿ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಹಂತ - 15) ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುತ್ತಾರೆ.

| ಕ್ರ.ಸಂ | ಹೆಸರು | ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆದ ದಿನಾಂಕ | ಪ್ರಾಧ್ಯಾಪಕ ಹುದ್ದೆಯಲ್ಲಿ 10 ವರ್ಷ ಪೂರ್ಣಗೊಳಿಸಿದ ದಿನಾಂಕ |
|---|---|---|---|
| 1 | ಡಾ: ಎಂ.ಪಾಂಡುರಂಗಪ್ಪ<br>ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | 24-12-2009 | 24-12-2019 |
| 2 | ಡಾ: ಹರಿಪ್ರಸಾದ್ ಎಸ್<br>ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | 05-12-2012 | 05-12-2022 |
| 3 | ಡಾ: ಪಿ.ಆರ್.ಚೇತನ<br>ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | 26-01-2013 | 26-01-2023 |

| | | | |
|---|---|---|---|
| 4 | ಡಾ: ವಿ.ಆರ್.ದೇವರಾಜ್<br>ಪ್ರಾಧ್ಯಾಪಕರ ಜೀವ ರಸಾಯನ ಶಾಸ್ತ್ರ ವಿಭಾಗ | 01-02-2010 | 01-02-2020 |

ಮೇಲ್ಕಂಡ ಬೋದಕರಿಗೆ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ – 14) ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಹಂತ – 15)ಕ್ಕೆ ಬಡ್ತಿ ನೀಡುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸಿ.ಎ.ಎಸ್ ನಿಯಮಾವಳಿ ಪ್ರಕಾರ ರಚಿಸಲಾದ ಆಯ್ಕೆ ಸಮಿತಿ ಸಭೆಯನ್ನು ದಿನಾಂಕ:02–03–2024ರಂದು ನಡೆಸಲಾಯಿತು. ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗುವುದು.

*ವಿವರಣೆ:*

ಈ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಪೂರ್ವದಲ್ಲಿ ಸದಸ್ಯರಾದ ಡಾ. ಪಿ.ಆರ್ ಚೇತನಾ ಹಾಗೂ ಡಾ. ಎಸ್ ಹರಿಪ್ರಸಾದ್ ರವರು ತಾವು ಪದೋನ್ನತಿಗಾಗಿ ಅರ್ಜಿಸಲ್ಲಿಸಿದ ಅಭ್ಯರ್ಥಿಯಾಗಿದ್ದು, ಈ ಕುರಿತು ನಿರ್ಣಯ ತೆಗೆದುಕೊಳ್ಳುವ ಸಂದರ್ಭದಲ್ಲಿ ಸಭೆಯಲ್ಲಿ ಉಪಸ್ಥಿತರಿರುವುದು ಸಮಂಜಸವಲ್ಲವೆಂದು ತಿಳಿಸಿ ಅಧ್ಯಕ್ಷರ ಅನುಮತಿ ಪಡೆದು ಸಭೆಯಿಂದ ಹೊರಗೆ ಉಳಿದರು.

*ಸಿಂಡಿಕೇಟ್ ತೀರ್ಮಾನ:*

ರಸಾಯನಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ ವಿಷಯಗಳ ಪ್ರಾಧ್ಯಾಪಕರ (ಶೈಕ್ಷಣಿಕ ಹಂತ 14)ರಿಂದ ಹಿರಿಯ ಪ್ರಾಧ್ಯಾಪಕ (ಶೈಕ್ಷಣಿಕ ಹಂತ 15)ಕ್ಕೆ ಪದೋನ್ನತಿಗಾಗಿ ಸಂಬಂಧಿಸಿದ ಆಯ್ಕೆ ಸಮಿತಿಗಳು ಮಾಡಿದ ಶಿಫಾರಸ್ಸುಗಳನ್ನು ಪರಿಗಣಿಸಿ ಕೆಳಗೆ ನಮೂದಿಸಿದ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 14) ರವರುಗಳಿಗೆ ಹಿರಿಯ ಪ್ರಾಧ್ಯಾಪಕರು (ಶೈಕ್ಷಣಿಕ ಹಂತ 15) ಹುದ್ದೆಗೆ ಯು.ಜಿ.ಸಿ–ಸಿಎಸ್ ನಿಯಮಾವಳಿಗಳ ಪ್ರಕಾರ ಅವರ ಹೆಸರುಗಳ ಮುಂದೆ ತೋರಿಸಿದ ಅರ್ಹತಾ ದಿನಾಂಕದಿಂದ ಅನ್ವಯಿಸಿ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

1. **Department of Chemistry**

| **Name** | **Recommendation** | **Date of Eligibility** |
|---|---|---|
| **Dr. M. Pandurangappa** | **Recommended for Promotion from Professor (Academic Level-14) to Senior Professor(Academic Level 15)** | **24.12.2019** |
| **Dr. S. Hariprasad** | | **05.12.2022** |
| **Dr. P.R. Chetana** | | **26.01.2023** |

2. **Department of Bio-Chemistry**

| **Name** | **Recommendation** | **Date of Eligibility** |
|---|---|---|
| **Dr. V.R. Devaraj** | **Recommended for Promotion from Professor (Academic Level-14) to Senior Professor(Academic Level 15)** | **01.02.2020** |

ಸದಸ್ಯರಾದ ಶ್ರೀ.ಎಂ.ವಿ ರಂಗಪ್ಪನವರು ಶಿಕ್ಷಕರಿಗೆ ನೀಡಬೇಕಾದ ಸೌಲಭ್ಯಗಳನ್ನು ನೀಡಲಾಗಿದ್ದು, ಅವರು ಸಹ ಹೆಚ್ಚಿನ ಆಸಕ್ತಿ ವಹಿಸಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಪ್ರಯತ್ನಿಸಬೇಕೆಂದು ಹೇಳಿದರು.

ಕುಲಪತಿಗಳು ಪದೋನ್ನತಿ ಹೊಂದಿದ ಪ್ರಾಧ್ಯಾಪಕರುಗಳಿಗೆ ಸಿಂಡಿಕೇಟ್ ಪರವಾಗಿ ಅಭಿನಂದನೆ ಸಲ್ಲಿಸಿ, ಪದೋನ್ನತಿ ಹೊಂದಿದ ಶಿಕ್ಷಕರರು ಹೆಚ್ಚಿನ ಕ್ರೀಯಾಶೀಲತೆಯಿಂದ ಕೆಲಸ ಮಾಡಿ ವಹಿಸುವ ವಿವಿಧ ಆಡಳಿತಾತ್ಮಕ ಮತ್ತು ಹೆಚ್ಚುವರಿ ಶೈಕ್ಷಣಿಕ ಜವಾಬ್ದಾರಿಗಳನ್ನು ಆಸಕ್ತಿಯಿಂದ ನಿರ್ವಹಿಸಿ, ಕಿರಿಯ ಅಧ್ಯಾಪಕರಿಗೆ ಮಾರ್ಗದರ್ಶನ ನೀಡಿ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಂಯಮದ ಅರಿವು ಮೂಡಿಸಲು ಪ್ರಯತ್ನಿಸಬೇಕೆಂದು ಅಭಿಪ್ರಾಯಪಟ್ಟರು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು